# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ, ಬೆಂಗಳೂರು

ಕ್ರಮಾಂಕ: ಇಡಿ 99 ಯುಡಿವಿ 2003  ದಿನಾಂಕ:09-07-2003

ಇಂದ,

ಸರ್ಕಾರದ ಕಾರ್ಯದರ್ಶಿ,(ಉನ್ನತ ಶಿಕ್ಷಣ)
ಬೆಂಗಳೂರು,

ಇವರಿಗೆ,

ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ - 580 003

ಮಾನ್ಯರೇ,

ವಿಷಯ: ಧಾರವಾಡದ ಕೆ.ಇ.ಬೋರ್ಡ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ಸಂಯೋಜನೆ.

ಉಲ್ಲೇಖ: ದಿನಾಂಕ:12-04-2003 ಸಂಖ್ಯೆ: ಕವಿವಿ/ವಿಮ/ಸಂಯೋಜನೆ/2003-2004/109ರ ನಿಮ್ಮ ಪತ್ರ.

*****

1) ಧಾರವಾಡದ ಕರ್ನಾಟಕ ಎಜುಕೇಶನ್ ಬೋರ್ಡ್ ಧಾರವಾಡದ ಮಾಳಮಡ್ಡಿಯಲ್ಲಿ ಕೆ.ಇ.ಬೋರ್ಡ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಬಿ.ಎ ಭಾಗ-1 ಮತ್ತು ಬಿ.ಕಾಂ ಭಾಗ-1 ಕೋರ್ಸುಗಳೊಂದಿಗೆ ಪ್ರಸಕ್ತ 2003-2004ನೇ ಶೈಕ್ಷಣಿಕ ಸಾಲಿನಿಂದ ಸ್ಥಾಪನೆಗೆ ಸಂಬಂಧಿಸಿದ ಸಂಯೋಜನಾ ಅರ್ಜಿಯನ್ನು ನಿಮ್ಮ ವಿಶ್ವವಿದ್ಯಾಲಯದ ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನಾಧರಿಸಿ ಶೈಕ್ಷಣಿಕ ಪರಿಷತ್ತಿನ ಸಮಾಲೋಚನೆಯೊಂದಿಗೆ ಸಿಂಡಿಕೇಟ್ ಮಾಡಿರುವ ಶಿಫಾರಸ್ಸಿನ ಬೆಳಕಿನಲ್ಲಿ ಸಂವೀಕ್ಷಿಸಲಾಗಿದೆ.

2) 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 59ನೇ ಪ್ರಕರಣದ (11) ನೇ ಉಪ ಪ್ರಕರಣದಡಿ ನಿಹಿತವಾದ ಅಧಿಕಾರವನ್ನು ಚಲಾಯಿಸಿ ಮೇಲ್ಕಂಡ ಕಾಲೇಜನ್ನು ಈ ಕೆಳಕಂಡ ಕೋರ್ಸುಗಳು ಮತ್ತು ಐಚ್ಛಿಕ ವಿಷಯಗಳೊಂದಿಗೆ

ಪು.ತಿ.ನೋ

2003-2004ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಸಂಯೋಜನೆಯನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಲಾಗಿದೆ.

| ಪದವಿ | ಭಾಷೆಗಳು | ಐಚ್ಛಿಕ ವಿಷಯಗಳು | ಪ್ರವೇಶ ಮಿತಿ |
|---|---|---|---|
| ಬಿ.ಎ | ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದಿ | ಅರ್ಥಶಾಸ್ತ್ರ, ಇತಿಹಾಸ ಇಂಗ್ಲೀಷ್ ರಾಜ್ಯಶಾಸ್ತ್ರ, ಭೂಗೋಳ, ಕನ್ನಡ, | 100 (ಒಂದುನೂರು) |
| ಬಿ.ಕಾಂ | ಇಂಗ್ಲೀಷ್, ಕನ್ನಡ, ಸಂಸ್ಕೃತ, ಹಿಂದಿ | ಅರ್ಥಶಾಸ್ತ್ರ, ಅಕೌಂಟೆನ್ಸಿ, ಸಂಖ್ಯಾ ಶಾಸ್ತ್ರ, ಇತಿಹಾಸ, ಭೂಗೋಳ ಹಾಗೂ ವಿಶ್ವವಿದ್ಯಾಲಯದಿಂದ ಕಡ್ಡಾಯಗೊಳಿಸಿದ ಇತರ ವಿಷಯಗಳು. | 100 (ಒಂದುನೂರು |

ಷರತ್ತುಗಳು:-

(1) ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದು ಶಾಶ್ವತ ಅನುದಾನರಹಿತ ಕಾಲೇಜ್‌ಯೆಂದು ಪರಿಗಣಿಸತಕ್ಕದ್ದು:

(2) ಪ್ರಸಕ್ತ ಅನುದಾನರಹಿತ ಷರತ್ತಿಗೆ ಒಳಪಡಿಸಲು ದಿನಾಂಕ:08-07-2003ರಂದು ಬರೆದುಕೊಟ್ಟಿರುವ ಮಧ್ಯಂತರ ಒಪ್ಪಂದದಲ್ಲಿನ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

(3) ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ ಆದೇಶಗಳು ಹಾಗೂ ವಿಶ್ವವಿದ್ಯಾಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಹಾಗೂ ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

3) ಎಂಟು ದಿನಗಳಲ್ಲಿ ಅಧಿಸೂಚನೆಯನ್ನು ಹೊರಡಿಸಿ ಅದರ ಪ್ರತಿಯನ್ನು ಕಳುಹಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ,

(ಮುದುಗಿಂಡಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ ಮತ್ತು ಸಾಮಾನ್ಯ-2)

ಪ್ರತಿ ಇವರಿಗೆ:-

(1) ಕಾಲೇಜು ಶಿಕ್ಷಣ ಆಯುಕ್ತರು/ನಿರ್ದೇಶಕರು, ಬೆಂಗಳೂರು - 560 001

(2) ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರು, ಧಾರವಾಡ - 580 003

(3) ಪ್ರಾಂಶುಪಾಲರು, ಕೆ.ಇ.ಬೋರ್ಡ್ ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ವಿದ್ಯಾರಣ್ಯ ಪದವಿ ಪೂರ್ವ ಕಾಲೇಜು ಆವರಣ, ಮದಿಹಾಳ ರಸ್ತೆ, ಧಾರವಾಡ 580 001.